ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.739/2014 CW-12 PW-13

| | | |
|---|---|---|
| ಹೆಸರು | : | ಮಲ್ಲಪ್ಪ |
| ತಂದೆಯ/ಗಂಡನ ಹೆಸರು | : | ಶಿವಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಉಪ್ಪಲದೊಡ್ಡಿ |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 16-01-2023

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ಚಾಸಾ-1 ರಿಂದ 3 ಮತ್ತು ಆರೋಪಿತರ ಪರಿಚಯ ಇರುವುದಿಲ್ಲ.

ನಾನು ಶ್ರೀರಾಮ ಸಿಟಿ ಯುನಿಟ ಫೈನಾನ್ಸ್ ನಲ್ಲಿ 2013 ನೇ ಸಾಲಿನಲ್ಲಿ ಬಂಗಾರದ ಸಾಲ ಪಡೆದಿದ್ದೆ. ಸಾಲವನ್ನು ಮರುಪಾವತಿಸಿ, ನನ್ನ ಬಂಗಾರ ಬಿಡಿಸಿಕೊಂಡಿದ್ದೇನೆ. ಆ ನಂತರ ನಾನು ಯಾವುದೇ ಸಾಲ ಪಡೆದಿಲ್ಲ, ಯಾವುದೇ ವಸ್ತುವನ್ನು ಅಡ ಇಟ್ಟಿರಲಿಲ್ಲ. ಚಾಸಾ-1 ರವರು ನನಗೆ ಗೊತ್ತಿಲ್ಲ, ಅವರು ನನಗೆ ಏನು ಹೇಳಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಆರೋಪಿತರು ಏನು ಮಾಡಿರುತ್ತಾರೆ ನನಗೆ ಗೊತ್ತಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ

ಆರೋಪಿತರು ಶ್ರೀರಾಮ ಸಿಟಿ ಯೂನಿಯನ್ ಫೈನಾನ್ಸ್ ನಲ್ಲಿ ಬಂಗಾರದ ಸಾಲದ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಆ ಫೆನಾನ್ಸ್‌ನಲ್ಲಿ ಬಂಗಾರ ಇಟ್ಟು ಪಡೆದ ಸಾಲವನ್ನು ಮರುಪಾವತಿಸಿದ ನಂತರ ಆರೋಪಿತರು ನನ್ನ ಈ ಹಿಂದಿನ ಸಹಿ ಮತ್ತು ಖಾತೆಯನ್ನು ದುರುಪಯೋಗಪಡಿಸಿಕೊಂಡು ಆರೋಪಿತರು ನನ್ನ ಹೆಸರಿನಲ್ಲಿ ಸಾಲ ಪಡೆದು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಕೇಳಿ ಗೊತ್ತಾಯಿತು ಎಂದರೆ ನನಗೆ ಗೊತ್ತಿಲ್ಲ. ಆ

ಸಾಲವನ್ನು ಮರುಪಾವತಿಸುವಂತೆ ಚಾಸಾ-1 ರವರು ನನಗೆ ಹೇಳಿದ್ದರು ಎಂದರೆ ಸರಿ ಅಲ್ಲ. ಈ ಬಗ್ಗೆ ನಾನು ದಿಃ 02-09-2013 ರಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ-54 ಎಂದು ಗುರುತಿಸಲಾಯಿತು. ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.